ಅಪರ ಸಿವಿಲ್  ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,
ದೊಡ್ಡಬಳ್ಳಾಪುರ

ಸಿ ಸಿ ನಂ : 1207/2017

ಪಿ ಡಬ್ಲ್ಯೂ - 1

ಸಿ ಡಬ್ಲ್ಯೂ - 2

ದಿಃ 01.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಹೆಸರು ಃ ರಾಮಚಂದ್ರ

ತಂದೆಯ ಹೆಸರು ಃ ತಮ್ಮಯ್ಯ

ವಯಸ್ಸು ಃ 56 ವರ್ಷ

ಉದ್ಯೋಗ ಃ ವ್ಯವಸಾಯ

ವಿಳಾಸ ಃ ದೊಡ್ಡಬೆಳವಂಗಲ, ದೊಡ್ಡಬಳ್ಳಾಪುರ ತಾಲ್ಲೂಕು

ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ

ಸಾಕ್ಷಿಯು ಪಂಚನಾಮೆಯಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಸಹಿಯನ್ನು ಸುಮಾರು 7-8 ವರ್ಷಗಳ ಹಿಂದೆ ಪೋಲೀಸರು ನಾನು ದೊಡ್ಡಬಳ್ಳಾಪುರದಿಂದ ಬರುತ್ತಿರುವಾಗ ಸಹಿ ಮಾಡು ಎಂದು ಹೇಳಿದ ಮೇರೆಗೆ ಮಾಡಿರುತ್ತೇನೆ.  ಯಾವ ಕಾರಣಕ್ಕಾಗಿ ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಸ ಸ ಅ ರವರಿಂದ

ದಿಃ 05.12.2015 ರಂದು  ಪೋಲೀಸರು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ದ ಘಟನಾ ಸ್ಥಳದ ಪಂಚನಾಮೆಯನ್ನು ಸಂಜೆ 04-30 ರಿಂದ 5-00 ಗಂಟೆಯವರೆಗೆ ಮಾಡಿ ನಿಪಿ-1 ಪಂಚನಾಮೆಯನ್ನು ಬರೆದು ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಅದೇ ಸಮಯದಲ್ಲಿ ಕೆಎ-25-ಎಎ-1139 ಕ್ಯಾಂಟರ್ ನ್ನು ಅಮಾನತ್ತುಪಡಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ  ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)

ಓ ಹೇ ಕೇ ಸ ಅದೆ

ಅಪರ ಸಿವಿಲ್  ನ್ಯಾ. ಮತ್ತು
ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ